# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292
Email: aeeceserkn@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ.
ಮೈಸೂರು.

ಸಂಖ್ಯೆ:-ಸಕಾನಿಇಂ/ಸ.ಇಂ/ಆರ್‌ಕೆನ/ಉವಿ/ಎಫ್ /2017-18/ 1308 ದಿನಾಂಕ:- 12/2/18

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ನರಸಿಂಹೇಗೌಡ, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 08.02.2018 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ ನರಸಿಂಹೇಗೌಡ, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು
2. ಶ್ರೀಯುತ ಸುರೇಂದ್ರ ಆರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಮಕೃಷ್ಣನಗರ ಉಪ ವಿಭಾಗ.
3. ಶ್ರೀಮತಿ ದಿವ್ಯ.ಸಿ.ಎನ್, ಸಹಾಯಕ ಇಂಜಿನಿಯರ್(ವಿ),ರಾಮಕೃಷ್ಣನಗರ ಉಪ ವಿಭಾಗ.
4. ಶ್ರೀಯುತ ಮುಹೀದ್ ಅಹಮದ್, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
5. ಶ್ರೀಯುತ ಗುರುಸ್ವಾಮಿ, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
6. ಶ್ರೀಯುತ ತಿಮ್ಮರಾಜು, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.
7. ಶ್ರೀಯುತ ವೆಂಕಟೇಶ್, ಕಿರಿಯ ಇಂಜಿನಿಯರ್(ವಿ), ಜಯಪುರ ಶಾಖೆ.

**ಹಾಜರಿದ್ದ ಗ್ರಾಹಕರು:-**

1. ಶ್ರೀ ಬಸವರಾಜು, ಗುಜ್ಜೇಗೌಡನಪುರ.
2. ಶ್ರೀ ಕೆ.ವಿ.ರಾಮನಾಥ್, ಶ್ರೀರಾಂಪುರ.

19 FEB 2018 8314

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ.ಕೆ.ವಿ.ರಾಮನಾಥ್, ಶ್ರೀರಾಂಪುರ 9448979349 | • ಶ್ರೀರಾಂಪುರ ಬ್ಲಾಕ್ 1 ಪಾರ್ಕಿನ ಬಳಿಯಲ್ಲಿರುವ ತಮ್ಮ ಮನೆಗೆ ವೋಲ್ಟೇಜ್‌ನಲ್ಲಿ ವ್ಯತ್ಯಾಸ ಇರುವುದಾಗಿ ತಿಳಿಸಿದರು.<br>• ಶ್ರೀರಾಂಪುರ ರಾಮಕೃಷ್ಣ ಶಾಲೆಯ ಬಳಿ ಫುಟ್‌ಪಾತ್‌ನಲ್ಲಿ ಗೈ ವೈರ್‌ನ್ನು ಅಳವಡಿಸಿದ್ದು, ಇದರಿಂದ ಗ್ರಾಹಕರಿಗೆ ಓಡಾಡಲು | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಪರಿವರ್ತಕ ನ್ಯೂಟ್ರಲ್ ಜಂಪ್‌ಗಳನ್ನು ಪರೀಕ್ಷಿಸಲು ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಇಂಜಿನಿಯರ್(ವಿ) ವಿವೇಕಾನಂದ ರವರಿಗೆ ತಿಳಿಸಿದರು.<br>• ಇದಕ್ಕೆ ಸಹಾಯಕ ಇಂಜಿನಿಯರ್(ವಿ) ವಿವೇಕಾನಂದ ಶಾಖೆ ರವರು ಪ್ರಸ್ತುತ |

AEE(E) 19/2

| | | | |
|---|---|---|---|
| | | ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | ಕಂಬಕ್ಕೆ ಮೊದಲೇ ಗೈ ವೈರ್ ಇ<br>ಫೂಟ್‌ಪಾತ್‌ನ್ನು ವಿಸ್ತರಿಸಿರುವುದಾ<br>ತಿಳಿಸಿದರು. ಹಾಗೂ ಇದನ್ನು ತೆಗೆದು<br>ಹಾಕಿ Struct Pole ನೀಡಲು ಸಹ<br>ಜಾಗವಿಲ್ಲದಿರುವುದಾಗಿ ತಿಳಿಸಿದರು.<br>ಇದಕ್ಕೆ ಮಾನ್ಯ ಅಧೀಕ್ಷಕ<br>ಇಂಜಿನಿಯರ್(ವಿ) ರವರ ಸ್ಥಳ<br>ಪರಿಶೀಲಿಸಿ ಸಾಧ್ಯವಾದಲ್ಲಿ ಉದ್ದನೆಯ ಗೈ<br>ವೈರ್‌ನ್ನು ಅಳವಡಿಸಲು ಕ್ರಮ<br>ತೆಗೆದುಕೊಳ್ಳುವಂತೆ ಸಹಾಯಕ<br>ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ರವರಿಗೆ ಸೂಚಿಸಿದರು. |
| 2. | ಶ್ರೀ ಬಸವರಾಜು ,<br>ಗುಜ್ಜೇಗೌಡನಪುರ<br>9945558149 | • ಹಾರೋಹಳ್ಳಿ ಶಾಖೆಗೆ ಸೇವಾ ಕೇಂದ್ರದ ವಾಹನವನ್ನು ಒದಗಿಸಿಕೊಡುವಂತೆ ಕೋರಿದರು.<br><br>• ಈಗಾಗಲೇ ಗುಜ್ಜೇಗೌಡನಪುರ ಗ್ರಾಮದಲ್ಲಿ ಶಿಥಿಲಗೊಂಡಿರುವ ಹಾಗೂ ಮಂಧ್ಯಂತರ ಕಂಬಗಳನ್ನು ಅಳವಡಿಸಲು ಕಾರ್ಯದೇಶ ಸಂಖ್ಯೆ ನೀಡಿದ್ದು, ಪ್ರಸ್ತುತ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಆಗುತ್ತಿರುವುದರಿಂದ ಶೀಘ್ರವಾಗಿ ಸದರಿ ಕಾಮಗಾರಿಯನ್ನು ಮುಗಿಸಿಕೊಡುವಂತೆ ಕೋರಿದರು.<br><br>• ಮದ್ದೂರು ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಸ್ಥಾವರಕ್ಕೆ ಎನ್.ಜೆ.ವೈ ವಿದ್ಯುತ್ ಸರಬರಾಜು ಕೊಡಿಸಿಕೊಡುವಂತೆ ಕೋರಿದರು. | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಈಗಾಗಲೇ ಜಯಪುರ ಶಾಖೆಯಲ್ಲಿ ಸೇವಾ ಕೇಂದ್ರ ವಾಹನವಿದ್ದು, ಇದನ್ನು ಹಾರೋಹಳ್ಳಿ ಶಾಖೆಯವರು ಸಹ ಉಪಯೋಗಿಸುತ್ತಿದ್ದು, ಸಾಧ್ಯವಾದಲ್ಲಿ ಮುಂದಿನ ದಿನಗಳಲ್ಲಿ ಹಾರೋಹಳ್ಳಿ ಶಾಖೆಗೆ ಪ್ರತ್ಯೇಕವಾಗಿ ಸೇವಾ ವಾಹನವನ್ನು ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.<br><br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶೀಘ್ರವಾಗಿ ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ನೀಡಿ ಕಾಮಗಾರಿಯನ್ನು ಮುಗಿಸಲು ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br><br>• ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಸದರಿ ಸ್ಥಾವರವು ಗ್ರಾಮದಿಂದ ಸುಮಾರು ಒಂದು ಕಿ.ಮೀ ದೂರದಲ್ಲಿದ್ದು, ಎನ್.ಜೆ.ವೈ ವಿದ್ಯುತ್ ಸರಬರಾಜು ನೀಡುವುದು ಕಷ್ಟಸಾಧ್ಯವೆಂದು ತಿಳಿಸಿದರು. ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಗ್ರಾಮದಿಂ ಹೊರಗಡೆ ಇರುವುದರಿಂದ ಸಾಧ್ಯವಾ ಪಂಚಾಯ್ತಿವತಿಯಿಂದ ಸ್ವಯಂ ನಿರ್ವಾಹಣಾ ಯೋಜನೆಯಡಿಯಲ್ಲಿ ಹಣವನ್ನು ಪಾವತಿಸಿ ಕಾಮಗಾರಿಯನ ಮಾಡಿಸಿಕೊಳ್ಳುವಂತೆ ಸೂಚಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಮಧ್ಯಾಹ್ನ 1:00 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ.
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.